ವ್ಯವಸ್ಥೆ ಇದೆ, ಆ ತರಹದ ವ್ಯವಸ್ಥೆಯನ್ನು ಇಲ್ಲಿ ಮಾಡಬಹುದೆಂಬ ದೃಷ್ಟಿಯಿಂದ ಸರ್ಕಾರದ ಮನವೊಲಿಸಿ ಆವತ್ತು ನಾನು ಶೂನ್ಯವೇಳೆಯಲ್ಲಿ ಹೇಳಿದ್ದೆ. ಅದಕ್ಕೆ ನನಗೆ ಉತ್ತರ ಸಿಗಲಿಲ್ಲ. ಏಕೆಂದರೆ ಡಿ.ಆರ್.ಪಾಟೀಲ್ ರವರು ಕೂಡ ಗಮನ ಸೆಳೆಯುವ ಸೂಚನೆಯಲ್ಲಿ ಉತ್ತರ ಕೊಡಬೇಕಾಗಿತ್ತು.

ಅಧ್ಯಕ್ಷರು:- ಶ್ರೀ ಡಿ.ಆರ್.ಪಾಟೀಲರವರು ಇವತ್ತು ಸದನದಲ್ಲಿ ಇಲ್ಲ. ಅದನ್ನು ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಡಿ.ಆರ್.ಪಾಟೀಲ್‌ರವರ ಒಂದು ನೋಟೀಸ್ ಪೆಂಡಿಂಗ್‌ನಲ್ಲಿದೆ. ಅದನ್ನು ಅವರು ಬಹಳ ಮೊದಲೇ ಕೊಟ್ಟಿದ್ದಾರೆ. ಸೋಮವಾರ ಈ ವಿಚಾರವನ್ನು ತೆಗೆದುಕೊಳ್ಳೋಣ.

(ಎ) ತರೀಕೆರೆ ತಾಲ್ಲೂಕಿನ ಜಂಬದ ಹಳ್ಳದ ಯೋಜನೆ ಕುರಿತು.

ಶ್ರೀ ಎಸ್.ಎಂ.ನಾಗರಾಜ್ (ತರೀಕೆರೆ): ಮಾನ್ಯ ಅಧ್ಯಕ್ಷರೆ, ಮೊನ್ನೆ 20ನೇ ತಾರೀಖಿನ ದಿವಸ ಶೂನ್ಯ ವೇಳೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಉತ್ತರವನ್ನು ಮಾನ್ಯ ಉಪಮುಖ್ಯಮಂತ್ರಿಗಳು ಆಮೇಲೆ ಒದಗಿಸುತ್ತೇವೆಂದು ಹೇಳಿದ್ದರು. ಆದರೆ, ಯಾವಾಗ ಒದಗಿಸುತ್ತಾರೆ ಎಂದು ತಿಳಿಸಬೇಕು. ಮತ್ತೆ ಇನ್ನೊಂದು ವಿಷಯ ನಮ್ಮ ತರೀಕೆರೆ ತಾಲ್ಲೂಕಿನ ಜಂಬದ ಹಳ್ಳದ ವಿಚಾರವಾಗಿ ನಾನು ಪ್ರಸ್ತಾಪ ಮಾಡುತ್ತೇನೆ. 1986ರಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ನೀರಾವರಿ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ದೇವೇಗೌಡರು ಇದನ್ನು ಉದ್ಘಾಟನೆ ಮಾಡಿದ್ದಾರೆ. ಈ ಓಬಿರಾಯನ ತಿರುವು ಯೋಜನೆ ಅದು ಇಲ್ಲಿಯವರೆಗೆ ಕಾರ್ಯಗತವಾಗಿಲ್ಲ. ಇದಕ್ಕೆ ಅನೇಕ ಬಾರಿ ನೀರಾವರಿ ಮಂತ್ರಿಗಳ ಹತ್ತಿರ ಮಾನವಿ ಮಾಡಿಕೊಂಡರೂ ಸಹ ಈ ಅರಣ್ಯ ಪರಿಸರ ಏನು ಇತ್ತು ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು ಎಂದು ಹೇಳಿದ್ದರು, ಅದರೆ ಆ ಅನುಮತಿ ಸಿಕ್ಕಿ ಈಗಾಗಲೇ ಒಂದು ವರ್ಷವಾಗಿದೆ. ಒಂದು ವರ್ಷವಾದಮೇಲೆ 3ಸಾರಿ ಟೆಂಡರನ್ನು ಕರೆದು ಈಗ ಮತ್ತೆ ಮುಂದಕ್ಕೆ ಹಾಕಿರತಕ್ಕಂತಹ ವಿಚಾರ ಸಹ ತಿಳಿಸಿದ್ದಾರೆ. ಆದಷ್ಟು ಬೇಗ ಈ ಕೆಲಸ ಮಾಡಬೇಕು. ಯಾವಾಗ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ನಾನು ತಮ್ಮ ಮೂಲಕ ಸಂಬಂಧಪಟ್ಟ ಭಾರಿ ನೀರಾವರಿ ಮಂತ್ರಿಗಳನ್ನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಜಂಬದ ಹಳ್ಳ ವಿಚಾರದಲ್ಲಿ, ಈಗಾಗಲೇ ಅವರೆ ಉತ್ತರ ಹೇಳಿದ ಹಾಗೆ, ಫಾರೆಸ್ಟ್ ಕ್ಲಿಯೆರೆನ್ಸ್ ಬಂದಿರಲಿಲ್ಲ, ಈಗ ಅದು ಬಂದಿದೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದೇವೆ. ಟೆಂಡರ್ ಕರೆಯಲು ತಡವಾದದ್ದಕ್ಕೆ ಕಾರಣವೇನೆಂದರೆ ಅದಕ್ಕೆ ಬಜೆಟ್ ಅಲೋಕೇಷನ್ ಇಟ್ಟಿರಲಿಲ್ಲ. ಈಗ ಎಲ್ಲ ಕ್ಲಿಯರೆನ್ಸ್ ಬಂದಿದ್ದರಿಂದ ಈ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇವೆ.